IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# “ಕಾಯಕ : ವಚನಗಳಲ್ಲಿ ಕಟ್ಟಲ್ಪಟ್ಟ ಬಗೆ”

**ಬಸವರಾಜು ಎಂ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆ ಎಸ್ ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ.**

**ಸಾರಾಂಶ**

ಹನ್ನೆರಡನೆಯ ಶತಮಾನ ಭಾರತೀಯ ಹಾಗೂ ಕರ್ನಾಟಕ ಇತಿಹಾಸದಲ್ಲಿ ಬಹು ಮುಖ್ಯವಾದ ಕಾಲ, ಅದರಲ್ಲೂ ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರಗಳಲ್ಲಿ ೧೨ನೇ ಶತಮಾನದ ವಚನ ಸಾಹಿತ್ಯ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಮತ್ತು ಸಾಹಿತ್ಯವಾಗಿ ಅತ್ಯಂತ ಪ್ರಮುಖವಾದ ಘಟ್ಟವಾಗಿದೆ. ಕಾಯಕ ಪದ ಅಥಾವ ಶಬ್ದ ಕಿವಿಗೆ ಬಿದ್ದ ತಕ್ಷಣ ನಮಗೆ “ಕಾಯಕವೇ ಕೈಲಾಸ ಎನ್ನುವ ಮಾತು ಹಾಗೂ ಇಡೀ ವಚನ ಸಾಹಿತ್ಯದ ಶರಣರು ಥಟ್ಟನೆ ನೆನಪಿಗೆ ಬರುತ್ತಾರೆ. ಕಾಯ (ದೇಹ) ಕ್ಕೆ ಸಂಬಂದಿಸಿದ್ದು ಕಾಯಕ. ಕೆಲಸ, ದುಡಿಮೆ ಮತ್ತು ದೇಹ ಶ್ರಮ... ಇಂತಹ ಅರ್ಥಗಳನ್ನು ಗ್ರಹಿಸಬಹುದು. ಅಂದರೆ ದೇಹವನ್ನು ದಣಿಸಿ ಬೆವರು ಸುರಿಸಿ ಪ್ರಾಮಾಣಿಕತೆಯಿಂದ ಸಂಪಾದಿಸುವ ದುಡಿಮೆಯೇ ನಿಜವಾದ ಕಾಯಕ. ಅಂದರೆ ಯಾವುದೇ ಕೆಲಸವಿರಬಹುದು ಮೇಲು-ಕೀಳು ಎಂಬ ಹಂಗು ಇರಬಾರದು. ಕಾಯಕ ಎಂಬ ಪದ ೧೨ ನೇ ಶತಮಾನದಿಂದ ಇತ್ತೀಚಿಗೆ ಹೆಚ್ಚು ಅರ್ಥವನ್ನು ಪಡೆದುಕೊಂಡಿತು. ಅಚ್ಚಗನ್ನಡದ ಪಾರಿಭಾಷಿಕ ಪದವಾಗಿ ರೂಢಿಗೆ ಬಂತು. ಕೆಲವರು ದೇಹವನ್ನು ದಣಿಸದೆ ಬುದ್ಧಿಶಕ್ತಿಯಿಂದಲೂ ಹಣ ಸಂಪಾದಿಸುವ ವರ್ಗ ಇತ್ತು. (ಈಗಲೂ ಈ ವರ್ಗ ಹೆಚ್ಚಾಗುತ್ತಲೇ ಇದೆ. ಎಲ್ಲರೂ ಇದನ್ನೆ ಬಯಸುತ್ತಾರೆ).

**ಪ್ರಮುಖ ಪದಗಳು: ಕಾಯಕ, ವಚನ, ಆಧ್ಯಾತ್ಮ, ಶಿವಶರಣ, ಲಿಂಗಪೂಜೆ**

ಹಿಂದೆ ಧರ್ಮ ಮತ್ತು ದರ್ಶನಕ್ಕೆ ಹೆಚ್ಚು ಮಹತ್ವ ನೀಡಿ ಕೇಳವರ್ಗದವರನ್ನು ಪರಾಶ್ರಯದಲ್ಲಿ ಬದುಕಲು ಹುಟ್ಟಿದವರೆಂದು ತಿಳಿದಿತ್ತು. ಆದರೆ ಶಿವಶರಣರು ಪರಾಶ್ರಯದ ಬದುಕಿನ ಹಂಗುಗಳನ್ನು ನಿರಾಕರಿಸಿ ಪರಮಾತ್ಮನ ಆಶ್ರಯದಲ್ಲಿ ಬದುಕುವಂತೆ ಕರೆ ನೀಡಿದರು, ಅವರ ಆಲೋಚನೆಯ ಪರಮಾತ್ಮ ಅದು ಆಯಾ ವ್ಯಕ್ತಿಗಳ ಶುದ್ಧ, ಸತ್ಯ ಮತ್ತು ಪ್ರಾಮಾಣಿಕ ಮನಸ್ಸತ್ವವಾಗಿತ್ತು. ಕಾಯಕವನ್ನು ಕೀಳಾಗಿ ಕಾಣುತಿದ್ದರು. ಕಾಯಕ ಸ್ವಾವಲಂಬಿ ಜೀವನದ ಮಾರ್ಗವೆಂದು ಶಿವಶರಣರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದರು. ಜೊತೆಗೆ ಶ್ರಮಸಂಸ್ಕೃತಿಯನ್ನು ಕೀಳಾಗಿ ಕಾಣುತ್ತಿದ್ದ ಮೇಲು ವರ್ಗದ ಮನೋಭಾವನೆಯನ್ನು ಶರಣರು ಬೇರೆ ಅರ್ಥ ವಾಖ್ಯಾನವನ್ನು ನೀಡಿದರು. ಅಂದರೆ ತಾನು ವಾಸ್ತವವಾಗಿ ಕಷ್ಟಪಡದೆ ಪರಾವಲಂಬಿಯಾಗುವುದನ್ನು ಅಥವಾ ಶ್ರಮವನ್ನು ತನ್ನ ಸುಖಕ್ಕೆ ತಿರುಗಿಸಿಕೊಳ್ಳುವ ಜಾಣತನವನ್ನು ಒಪ್ಪುವುದಿಲ್ಲ”.

ಆಧ್ಯಾತ್ಮ ಸಾಧನೆಗೆ ದೇಹ ಅನಿವರ್ಯ ಸಾಧನವಾಗಿದೆ ಎಂದು ನಂಬಿದನ್ನು ಬಸವಣ್ಣ ಕೂಡಲಸಂಗಮ ದೇವರನ್ನು ಒಲಿಸ ಬಂದ ಪ್ರಸಾದ ಕಾಯವ ಕೆಡಿಸಲಾಗದು’ ಎಂದು ಸಾರಿ ಹೇಳಿದ್ದಾರೆ. ಹಸಿವು ನೀರಡಿಕೆಗಳನ್ನು ನಿಗ್ರಹಿಸಿ ದೇಹವನ್ನು ಅಧ್ಯಾತ್ಮ ಸಾಧನೆಗೆ ಹದಗೊಳಿಸಬೇಕೆಂಬ ಸಾಂಪ್ರದಾಯಿಕ ಅಭಿಪ್ರಾಯವನ್ನು ವಚನಕಾರರು ತಿರಸ್ಕರಿಸುತ್ತಾರೆ. (ಸಿದ್ಧಾರ್ಥ (ಬುದ್ಧ) ಮನೆ ಬಿಟ್ಟು ಹೋಗಿ ನಂತರ ದೇಹವನ್ನು ನಿಗ್ರಹಗೊಳಿಸಿ ನಂತರ ಅದನ್ನು ಕೈ ಬಿಡುತ್ತಾನೆ)

ಬದುಕು ನಡೆಸಲು ನಾವು ಕೈಗೊಳ್ಳುವ ಯಾವುದೇ ಇರಲಿ ಈ ದೇಹಕ್ಕೆ ಬೇಕಾಗಿರುವ ಹಸಿವಿನ ತೀವ್ರತೆಯನ್ನು ವಚನಕಾರರು ಸಮವಾಗಿಕೊಂಡಿದ್ದಾರೆ. ಅಲ್ಲಮಪ್ರಭು ತಮ್ಮ ವಚನದಲ್ಲಿ ಕಾಯಕದೊಳಗೆ ಕರುಳುಳ್ಳನ್ನಕ್ಕರ ಹಸಿವು ಮಾಣದು'ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು'' ದೇವರಿಗೆ ದೇಹವಿಲ್ಲ ಎಂದ ಮೇಲೆ ಹಸಿವು ಎಲ್ಲಿಂದ ದೇವರಿಗಿಂತ ಮಾನವನ ಜನ್ಮವೇ ಶ್ರೇಷ್ಠ ಎನ್ನಬಹುದು.

**ದೇವರದಾಸಿಮಯ್ಯ ಒಂದು ವಚನದಲ್ಲಿ**

**ಒಡಲುಗೊಂಡವ ಹಸಿವ ಒಡಲುಗೊಡವ ಹುಸಿವ**

**ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ**

**ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ**

ಅಂದರೆ ಹಸಿವನ್ನು ತಿರಸ್ಕ್ರಿಸಲು ಸಾಧ್ಯವಿಲ್ಲ. ದೇಹವನ್ನು ಗೌರವಿಸಬೇಕಾದರೆ ಅದರೊಳಗೆ ಇರುವ ಹಸಿವನ್ನು ನೀಗಿಸಲು ಕಾಯಕವನ್ನು ಮಾಡಬೇಕು. ನಾವು ಬದುಕುವ ಸಮಾಜದಲ್ಲಿ ಎಲ್ಲಾ ವರ್ಗದ ಜನರು ಬೇಕು ಪ್ರತಿಯೊಬ್ಬರು ತಮ್ಮ ಕೆಲಸದ ಮೂಲಕವೇ ಮುಕ್ತಿ ದೊರೆಕಿಸಿಕೊಳ್ಳಬೇಕು ಎಂಬುದು ಶಿವಶರಣರ ತತ್ವ. ಅದರೆ ಕಾಯಕ ಎಂಬುದು ಕೆಳವರ್ಗದವರು ಮಾಡಬೇಕು ಅವರ ಹಿಂದಿನ ಜನ್ಮದ ಪಾಪದ ಫಲವಾಗಿ ಈಗ ಆ ಕೆಲಸ ಮಾಡಬೇಕು ಎಂದು ಜನರಲ್ಲಿ ತಪ್ಪು ಕಲ್ಪನೆ ಮೂಡಿಸಿದ್ದಾರೆ. ಮೇಲು ವರ್ಗದ ಜನರು ದುಡಿಮೆ ಅಥವಾ ಕಾಯಕ ಮಡುವುದು ಕೀಳು ಎಂದು ಭಾವನೆ ಇತ್ತು ಇದನ್ನು ಶಿವಶರಣರು ಬೇರೆ ರೀತಿಯಲ್ಲಿ ತಿಳಿಸಿದರು.

೧೨ ನೇ ಶತಮಾನದ ಅನೇಕರು ಸಮಾಜದ ವಿವಿಧ ಕಾಯಕ ಅಥವಾ ವೃತ್ತಿಗಳಲ್ಲಿ ಮಾಡುತ್ತಾ ತಮ್ಮ ಕಾಯಕದ ಮೂಲಕವೇ ಮುಕ್ತಿ ಸಾಧಿಸಲು ಯತ್ನಿಸಿದರು. ಅಂಬಿಗರ ಚೌಡಯ್ಯ, ಜೇಡರದಾಸಿಮಯ್ಯ, ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ತುರುಗಾಹಿ ರಾಮಣ್ಣ, ಹಡಪದ ಅಪ್ಪಣ್ಣ, ಉರಿಲಿಂಗಪೆದ್ದಿ, ಸೂಳೆಸಂಕವ್ವ, ಕಿನ್ನರಿಬಹ್ಮಯ್ಯ, ನುಲಿಯಚಂದ್ರಯ್ಯ..ಹೀಗೆ ಅನೇಕ ಶಿವಶರಣರ ಹೆಸರುಗಳಿಂದ ಅವರವರ ಕಾಯಕವನ್ನು ಅರಿಯಬಹುದು. ಬಸವಣ್ಣನವರ ಮತ್ತು ಇತರ ಶಿವಶರಣರು ಕಾಯಕದ ಬಗ್ಗೆ ತಿಳಿಸುತ್ತಾ ದುಡಿಮೆಯೇ ಪರಮಾತ್ಮನ ಪೂಜೆ ಲಿಂಗಾರ್ಪಣ ಭಾವನೆಯಿಂದ ಕಾಯಕದಲ್ಲಿ ನಿರತರಾಗುವುದು ಮುಖ್ಯ. ಹೀಗೆ ಎಲ್ಲಾ ಕಾಯಕದವರನ್ನು ಧರ್ಮ ಅಪ್ಪಿಕೊಂಡಿತ್ತು.

**ಇಂದಿಗೆ ನಾಳಿಗೆ ಎಂಬ ಸಂದೇಹಮಂ ಬಿಟ್ಟು**

**ಮುಂದಣ ಕಾಯಕ ಅಂದಿಂದಿಗೆ ಉಂಟು ಎಂಬುದನರಿದು**

**ಬಂದುದ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ**

**ಸದಾನಂದದಲ್ಲಿಪ್ಪ ಭಕ್ತನಂಗಳ ಮಂಗಳಮಯ ಕೈಲಾಸ**

ಭಕ್ತರಿಗೆ ಕಾಯಕ ಪವಿತ್ರ ಮತ್ತು ತೃಪ್ತಿಯಿಂದ ಇದ್ದು ಆ ದುಡಿಮೆಯಿಂದ ಆನಂದ ಇರಬೇಕು. ಕಾಯಕ ತಪ್ಪಿದಡೆ ಸೈರಿಸಬಾರದು ಎಂಬುದು ಶಿವಶರಣರ ನಿಯಮ. ಅಸಿಯಾಗಲಿ ಕೃಷಿಯಾಗಲಿ ವಾಚಕ ವಾಣಿಜ ಮಸಿಯಾಗಲಿ ಮಾಡುವಲ್ಲಿ ಹುಸಿಯಿಲ್ಲದಿಬೇಕು. ಅದು ಅಸಮಾನಕ್ಷರ ಬರವು ಪಶುಪತಿಯಿರವು ಐಘಟದೂರ ರಾಮೇಶ್ವರ ಲಿಂಗವು ತಾನೆ. ಇಲ್ಲಿ ಯಾವುದೇ ಕಾಯಕವಿರಲಿ ಅದರಲ್ಲಿ ಪಶುಪತಿ ಇದ್ದಾನೆಂದು ತಿಳಿಸಿ ಕಾಯಕದ ಮಹತ್ವವನ್ನು ತಿಳಿಸಿದರು.

**ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ**

**ಓಡಲಾಗದು ಲೆಂಕನು ಬೇಡಲಾಗದು ಭಕ್ತನು**

**ಓಡೆನೆಯ್ಯ ಬೇಡೆನಯ್ಯಾ ಕೂಡಲಸಂಗಮದೇವಾ**

ಶಿವನನ್ನು ಬೇಡಿ ಸ್ವಾರ್ಥಕ್ಕಾಗಿ ಬೇಡಿ ಪಡೆಯುವುದನ್ನು ಶಿವಶರಣರು ಒಪ್ಪುವುದಿಲ್ಲ. ಕಾಯಕದ ಮೂಲಕವೇ ಪರಿಹಾರವಿದೆ ಎಂದು ವಚನಕಾರರು ತಿಳಿಸಿಕೊಟ್ಟರು.

**ಮತ್ತೊಬ್ಬರ ಅಪ್ಪ ಅಣ್ಣ ಎಂದು**

**ಚಿತ್ತವಕಲಕುವುದದು ಕಷ್ಟ**

**ಈ ಹೊತ್ತ ದೇಹಕ್ಕೆ ನಗೆಯ ಚಿತ್ತದ ಕಾಯಕ**

**ಇದನೊಪ್ಪುಗೊ ಆತಿವ ವೈರಿ ಮಾರೇಶ್ವರಾ**

ಶರಣರಿಗೆ ದುಡಿದು ಬದುಕುವ ಛಲ ಯಾವುದಾದರೊಂದು ಕೆಲಸ ಮಾಡಿ ಪ್ರಾಮಾಣಿಕತೆಯಿಂದ ಯಾವುದೇ ವೃತಿ ಮೇಲು-ಕೀಳಲ್ಲ ಎಂದು ನಂಬಿದರು. ಸಕಳೇಶ ಮಾದರಸ ತಮ್ಮ ವಚನದಲ್ಲಿ ದೇವರಲ್ಲಿ ವರ ಕೇಳುವುದು ಕೀಳು ಎಂದಿದ್ದಾರೆ. ಅರ್ಚಿಸಿ ಪೂಜಿಸಿ ನಿಮ್ಮ ವರವ ಬೇಡಿವೆನಾದಡೆ, ಬಾರದ ಭವಂಗಳಲ್ಲಿ ಎನ್ನ ಎರಿಸು ಸಕಳೇಶ್ವರದೇವಾ, ದುಡಿಮೆಯಿಂದ ಹಣವ ಗಳಿಸಿ ವೈಭವ ಜೀವನ ಬೇಕಾಗಿಲ್ಲ ಮಿತಿ ಇತ್ತು. ಒಂದು ಕಡೆ ನುಲಿಯ ಚೆಂದಯ್ಯ ನೇಮದ ಕೂಲಿಯ ಬಿಟ್ಟು ಹೆಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ ತಾ ಮಾಡುವ ಸೇವೆ ನಷ್ಟವಯ್ಯ.

ಆಯ್ದುಕ್ಕಿ ಮಾರಯ್ಯ ತಮ್ಮ ವಚನದಲ್ಲಿ ದುಡಿಮೆಗೆ ತಕ್ಕ ಕೂಲಿ ದುರಾಸೆ ಇರಬಾರದು ಹಾಗದ ಕಾಯಕವ ಮಾಡಿಕೊಂಡು ಹಣವಡ್ಡುವ ತಾ ಎಂಬಲ್ಲಿ ಸತ್ಯ ಕಾಯಕವುಂಟೆ? ಬಸವಣ್ಣನವರ ಒಂದು ವಚನ ಸ್ವಷ್ಟವಾಗಿ ವೃತ್ತಿ ಮತ್ತು ಜಾತಿಗಳ ಸಂಬಂಧವನ್ನು ತಿಳಿಸುತ್ತದೆ. ಕಾಸಿ ಕಮ್ಮಾರನಾದ ಬೀಸಿ ಮಡಿಮಳನಾದ ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ ಬೊಕ್ಕಸದ ಚಿಕ್ಕಣ್ಣ ತಮ್ಮ ವಚನದಲ್ಕಿ ಕಾಯಕ ದೇಹಕ್ಕೆ ಸಂಬಂಧಿಸಿದರೂ ಆತ್ಮಜ್ಞಾನದ ಮಹಾಬೆಳಕಾಗುತ್ತದೆ ಎಂದಿದ್ದಾರೆ.

ಕಾಯಕ ಹಲವಾದಲ್ಲಿ ಮಾಡುವ ಮಾಟ ಶರಣರೊಳಗಾಟ ಲಿಂಗವ ಕೊಡುವ ಕೂಟ ಏಕವಾಗಿರಬೇಕು ಬಸವಣ್ಣಪ್ರಿಯ ನಾಗೇಶ್ವರ ಲಿಂಗವನರಿವುದಕ್ಕೆ ಬಸವಣ್ಣ ಮತ್ತೊಂದು ವಚನದಲ್ಲಿ ಎಲ್ಲಾರು ಒಂದೇ ನಾವೆಲ್ಲರೂ ಸಮಾನರು ಕಾಯಕಕ್ಕೆ ಭಿನ್ನ ಬೇಧ ಬೇಡ ಎಲ್ಲಾ ವೃತ್ತಿಗಳನ್ನು ಗೌರವದಿಂದ ಕಾಣಬೇಕು ಎಂದರು.

**ದೇವ ಸಹಿತ ಭಕ್ತ ಮನೆಗೆ ಬಂದಡೆ**

**ಕಾಯಕವಾವುದೆಂದು ಬೆಸೆಗೊಡೆನಾದೆಡೆ**

**ನಿಮ್ಮಾಣೆ ನಿಮ್ಮ ಪ್ರಮಥರಾಣೆ**

**ತಲೆದಂಡ ತಲೆದಂಡ ಕೂಡಲಸಂಗಮದೇವಾ**

**ಭಕ್ತರಲ್ಲಿ ಕುಲವನರಸಿದೆಡೆ ನಿಮ್ಮ ರಾಣೆವಾಸದಾಣೆ**

ಬಸವಣ್ಣನವರ ಉದಾರತನ ಹೃದಯ ವೈಶಾಲತೆಯಿಂದ ಎಲ್ಲಾ ಕಾಯಕ ವರ್ಗದವರನ್ನು ಗೌರವದಿಂದ ಕಾಣುತ್ತಾರೆ.

**ಎಮ್ಮ ತಾಯಿ ನಿಂಬವ್ವೆ ನೀರನೆರೆದುಂಬಳು**

**ಎಮ್ಮಯ್ಯ ಚೆನ್ನಯ್ಯ ಕಾಯಕಂಪಣವ ಹೊರುವ**

**ಎಮಗಾರೂ ಇಲ್ಲವೇಂಬಿರಿ**

**ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು**

**ಕೂಡಲ ಸಂಗನ ಶರಣರ ಅನುಭಾವ**

**ಮಡಿವಾಳನ ಕಾಯಕದಂತೆ**

ವಚನಕಾರರ ಜೀವನದಲ್ಲಿ ಕಾಯಕ ನಡೆ-ನುಡಿ ಎರಡೂ ಒಂದೇ ಆಗಿತ್ತು ಅದರಲ್ಲೂ ಆಯ್ದಕ್ಕಿ ಮಾರಯ್ಯ ಮತ್ತು ಆಯ್ದಕ್ಕಿ ಲಕ್ಷಮ್ಮ ಇವರದು ಅಪೂರ್ವ ದಾಂಪತ್ಯ. ಇವರು ಕಾಯಕದ ಘನತೆಯನ್ನು ಈ ರೀತಿ ವಿವರಿಸುತ್ತಾರೆ. ಅಂದರೆ ಗುರುಲಿಂಗ ಜಂಗಮ ಕಾಯಕದ ಮುಂದೆ ಗೌಣವೆನಿಸುತ್ತದೆ.

ಕಾಯಕದಲ್ಲಿ ನಿರುತನಾದರೆ ಗುರುದರ್ಶನವಾದಡೂ ಮರೆಯಬೇಕು ಲಿಂಗಪೂಜೆಯಾದಡೂ ಮರೆಯಬೇಕು ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು. ಕಾಯಕ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು ಕಾಯಕವೆಂಬುದು ಕೇವಲ ಉದರ ನಿಮಿತ್ತವಲ್ಲ. ಅದೊಂದು ಹೊಟ್ಟೆ ಹೊರೆಯುವ ಉದ್ಯೋಗವಲ್ಲ, ಅದಕ್ಕಿಂತ ವ್ಯಾಪಕವಾದ್ದು ಕಾಯಕ. ಪ್ರತಿದಿನ ತರುವ ಅಕ್ಕಿಗಿಂತ ಹೆಚ್ಚು ಅಕ್ಕಿ ತಂದ ಗಂಡನಿಗೆ ಆಯ್ದಕ್ಕಿ ಲಕ್ಷಮ್ಮ ಈ ರೀತಿ ಹೇಳುತ್ತಾಳೆ. ಶುದ್ಧವಾದ ಕಾಯಕದಿಂದ ಜೀವನ ನಡೆಸಬೇಕು ಮತ್ತು ದಾಸೋಹ ನಡೆಸಬೇಕು.

**ಆಸೆಯೆಂಬುದು ಅರಸಗಲ್ಲದೆ**

**ಶಿವಭಕ್ತರಿಗೆಲುಂಟೇ ಅಯ್ಯಾ?**

**ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ?**

**ಈಸಕ್ಕಿ ಆಸೆ ನಮಗೇಕೆ? ಈಶ್ವರನೊಪ್ಪ**

**ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಬಾರಯ್ಯ?**

ಕಾಯಕದ ಮೂಲಕ ಭಕ್ತ ತನ್ನ ಅಗತ್ಯಗಳನ್ನು ಪೂರೈಸಿದ ಮೇಲೆ ಮಿಕ್ಕದನ್ನು ಸಮಾಜದ ಏಳಿಗೆಗೆ ವಿನಿಯೋಗಿಸಬೇಕು. ಸ್ವಂತಕ್ಕೆ ಶೇಖರಿಸಬಾರದು.

**ಆಯ್ದಿಹೆನೆಂದು ಕಾಯಕದ ಅರಿಕೆ ಹಿಂಗಿತೆ?**

**ನಾ ಮಾಡಿಹೆನೆಂಬ ತವಕ ಹಿಂಗಿತೆ?**

**ಉಭಯದ ಕೈಕೂಲಿ ಹೀಂಗಿ.**

**ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ಅಲಸಿಕೆಯಾಯಿತು.**

ಇಲ್ಲಿ ಆಸೆಬುರುಕತನವನ್ನು ಹಂಗಿಸಿದ್ದಾಳೆ. ಹಾಗೆಯೇ ಗರ್ವದಿಂದ ಮಾಡುವ ಕಾಯಕ ಭಕ್ತಿ ದ್ರವ್ಯದ ಕೇಡು ಎಂದು ಹೇಳಿ ನಿಷ್ಕಾಮ,ಕರ್ಮಯೋಗವನ್ನು ಸಹಜ ಸುಂದರ ತನ್ನ ನುಡಿಗಳಲ್ಲಿ ಹೇಳಿದ್ದಾಳೆ. ಕಾಯಕ ಮಾಡಿ ಬದುಕಬೇಕೇ ಹೊರತು ಬೇಡುವ ಹಂಗಿನ ಜೀವನ ಬೇಡವೆಂಬ ಹೇಳಿದ ಸ್ವಾಭಿಮಾನಿ ಹೆಣ್ಣು.

ಮತ್ತೊಬ್ಬ ಶಿವಶರಣ ನುಲಿಯ ಚಂದಯ್ಯ ಕಾಯಕದ ಬಗ್ಗೆ ಈ ರೀತಿ ತಮ್ಮ ವಚನದಲ್ಲಿ ಹೇಳಿದ್ದಾರೆ

ಸತ್ಯ ಶುದ್ಧ ಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಷ್ಕಂದವಾಗದಿರಬೇಕು

ನೇಮದ ಕೂಲಿಯಿಂದಿನ ನಿತ್ಯ ನೇಮದಲ್ಲಿ ಸಂದಿರಬೇಕು

ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯದ ಹಿಡಿದರೆ

ತಾ ಮಾಡುವ ಸೇವೆ ನಷ್ಟವಯ್ಯ |

ನನಗೆ ಜಂಗಮದ ಪ್ರಸಾದವಾಗು ಚಂದೇಶ್ವರ ಲೀಂಗಕ್ಕೆ ಪ್ರಾಣವಯ್ಯ |

ಕಾಯಕದಿಂದ ಬರುವ ಹಣದಿಂದಲೇ ನಾವು ತೃಪ್ತರಾಗಬೇಕೇ ಹೊರತು ಇನ್ನೂ ಬೇಕು ಎಂಬ ಆಸೆಯಿಂದ ಬಲಿಯಾದರೆ ಆ ಸೇವೆ ವ್ಯರ್ಥ ಎಂಬುದು ಈ ವಚನದ ಆಶಯವಾಗಿದೆ. ಒಟ್ಟಾರೆ ದೇಹವನ್ನು ದಣಿಸಿ ಬೆವರು ಸುರಿಸಿ ಪ್ರಾಮಾಣಿಕತೆಯಿಂದ ಸಂಪಾದಿಸುವ ದುಡಿಮೆಯೇ ನಿಜವಾದ ಕಾಯಕ. ಅಂದರೆ ಯಾವುದೇ ಕೆಲಸವಿರಬಹುದು ಮೇಲು-ಕೀಳು ಎಂಬ ಹಂಗು ಇರಬಾರದು. ಕಾಯಕ ಎಂಬ ಪದ ೧೨ ನೇ ಶತಮಾನದಿಂದ ಇತ್ತೀಚಿಗೆ ಹೆಚ್ಚು ಅರ್ಥವನ್ನು ಪಡೆದುಕೊಂಡಿತು.

ಆಕರ ಗ್ರಂಥಗಳು


೧. ಕನ್ನಡ ಸಾಹಿತ್ಯ ಚರಿತ್ರೆ – ರಂ. ಶ್ರೀ. ಮುಗುಳಿ

೨. ವಚನಾನುಭವ – ಪ್ರೊ. ಆರ್. ರಾಚಪ್ಪ

೩. ವಚನ ಧರ್ಮಸಾರ–ಎಂ. ಆರ್. ಶ್ರೀನಿವಾಸಮೂರ್ತಿ

೪. ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶಾಮರಾಮ

೫. ವಚನ ಸಾಹಿತ್ಯ –ಡಾ.ಎಂ.ಚಿದಾನಂದ ಮೂರ್ತಿ–

೬. ಶರಣ ಜಗತ್ತು (ಅಭಿವಂದನ ಗ್ರಂಥ)– ಸಂಪಾದಕ: ವಿದ್ವಾನ್ ಎಂ. ಶಿವಕುಮಾರಸ್ವಾಮಿ